ಜನವರಿ 93ರ ವರೆವಿಗೂ 3.89 ಲಕ್ಷರೂ. ವೆಚ್ಚ ಮಾಡಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ. ಕಾಮಗಾರಿಗಳನ್ನು ಏಪ್ರಿಲ್ 93ರಲ್ಲಿ ಮುಗಿಸುವ ಕಾರ್ಯಕ್ರಮವಿದೆ.

ಉ) ವರ್ಷವಾರು ಬಿಡುಗಡೆಯಾಗುವ ನಿರ್ವಹಣ ಅನುದಾನಕ್ಕೆ ಅನುಗುಣವಾಗಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗುವುದು.

ಕೊಡಗು ಜಿಲ್ಲೆಯ ರಸ್ತೆಗಳನ್ನು ದುರಸ್ತುಗೊಳಿಸುವುದು.

2186: ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರಿನಿಂದ ವಿರಾಜಪೇಟೆ ಮಾಕುಟ್ಟ ಮೂಲಕ ಕೇರಳಕ್ಕೆ ಹೋಗುವ ರಸ್ತೆ ಹಾಳಾಗಿದ್ದು ಕಳೆದ 10 ವರ್ಷಗಳಿಂದ ದುರಸ್ತಿಯಾಗುದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹುಣಸೂರು–ಪಿರಿಯಾಪಟ್ಟಣ–ಕುಶಾಲನಗರ ರಸ್ತೆ, ಹಾಗೂ ಹುಣಸೂರು ಅನೇಚೌಕೂರು ಗೇಟ್–ಗೋಣೇಕೊಪ್ಪ–ವೀರಾಜಪೇಟೆ ರಸ್ತೆಗಳು ತೀರಾ ಹದಗೆಟ್ಟಿದ್ದು ಕಳೆದ 10 ವರ್ಷಗಳಿಂದಲೂ ದುರಸ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲ್ಕಂಡ ರಸ್ತೆಗಳು ಉದ್ದವೆಷ್ಟು ಮತ್ತು ಈವರೆಗೂ ದುರಸ್ತಿಯಾಗದಿರುವುದಕ್ಕೆ ಕಾರಣವೇನು;

ಈ) ಯಾವಾಗ ದುರಸ್ತಿಗೊಳಿಸಲಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಲಭ್ಯವಿರುವ ನಿರ್ವಹಣ ಅನುದಾನದಿಂದ ಸದರಿ ರಸ್ತೆಯನ್ನು ಸಾಕಷ್ಟು ಸುಸ್ಥಿತಿಯಲ್ಲಿಡಲಾಗಿದೆ.

ಆ) ಲಭ್ಯವಿರುವ ನಿರ್ವಹಣ ಅನುದಾನದಿಂದ ಸದರಿ ರಸ್ತೆಯನ್ನು ಸಾಕಷ್ಟು ಸುಸ್ಥಿತಿಯಲ್ಲಿಡಲಾಗಿದೆ.

ಇ) 1) ಹುಣಸೂರು ಪಿರಿಯಾಪಟ್ಟಣ ಕುಶಾಲನಗರ ರಸ್ತೆಯು ಮೈಸೂರು–ಬಂಟ್ವಾಳ ರಾಜ್ಯ ಹೆದ್ದಾರಿಯ ಭಾಗವಾಗಿದ್ದು, ಈ ಭಾಗವು 72.30 ಕಿ.ಮೀ ಉದ್ದವಿದೆ.

2) ಹುಣಸೂರುನಿಂದ ಅನೇಚೌಕೂರು–ಗೋಣಿಕೊಪ್ಪ–ವೀರಾಜಪೇಟೆ ರಸ್ತೆಯ ಉದ್ದವು 54.78 ಕಿ.ಮೀ. ಉದ್ದವಿದೆ.

3) ಮೈಸೂರಿನಿಂದ ವೀರಾಜಪೇಟೆ ಮಾಕುಟ್ಟ ಮೂಲಕ ಕೇರಳಕ್ಕೆ ಹೋಗುವ ರಸ್ತೆಯ ಉದ್ದವು 537.4 ಕಿ.ಮೀ. ಇರುತ್ತದೆ.

4) ಈ ರಸ್ತೆಗಳನ್ನು ಪ್ರತಿ ವರ್ಷವೂ ಲಭ್ಯವಾಗುವ ನಿರ್ವಹಣಾ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲಾ ವ್ಯಾಪ್ತಿಗೆ ಬರುವ ರಸ್ತೆಗಳ ನಿರ್ವಹಣೆ ಭಾಗದ ಹಾಗೂ ದುರಸ್ಥಿಗಾಗಿ 45.12 ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ.

ಈ) ಈ ರಸ್ತೆಗಳ ನಿರ್ವಹಣೆ ದುರಸ್ತಿ ನವೀಕರಣ ಹಾಗೂ ವಿಶೇಷ ದುರಸ್ತಿ ಕಾಮಗಾರಿಗಳನ್ನು ಪ್ರತಿ ವರ್ಷ ಲಭ್ಯವಾಗಿರುವ ಅನುದಾನಕ್ಕೆ ಅನುಗುಣವಾಗಿ ಕೈಗೊಳ್ಳಲಾಗುತ್ತದೆ. ಇದು ಪ್ರತಿ ವರ್ಷವೂ ಮಾಡಲಾಗುವ ಪ್ರಕ್ರಿಯೆಯಾಗಿರುತ್ತದೆ.